

ನಾವು ಸಿನಿಮಾ ಕ್ಷೇತ್ರಕ್ಕೆ ಬರುವುದಕ್ಕೂ ಮುಂಚೆ ನಮಗೆಲ್ಲ ಸ್ವಪ್ನಸದೃಶವಾಗಿ ಕಂಡ ಕೆಲವೇ ಕೆಲವು ನಟರಲ್ಲಿ ಅಮಿತಾಭ್ ಬಚ್ಚನ್ ಕೂಡ ಒಬ್ಬರು. ಅವರ ಧ್ವನಿ, ಎತ್ತರ, ಕಣ್ಣು, ಇಡೀ ಇಂಡಿಯಾ ಅವರ ಸಿನಿಮಾಗಳಿಗೋಸ್ಕರ ಕಾಯ್ತಾ ಇದ್ದಿದ್ದು, ಒಮ್ಮೆ ಶೂಟಿಂಗ್‌ನಲ್ಲಿ ಹೋಗ್ಬಿಟ್ರು ಎಂದು ಸುದ್ದಿಯಾಗಿದ್ದು, ಅವರು ಇನ್ನು ಸಿನಿಮಾ ಮಾಡುವುದಿಲ್ಲ ಎಂಬ ಸುದ್ದಿಗಳೆಲ್ಲ ಪತ್ರಿಕೆಗಳಲ್ಲಿ ಬಂದಿದ್ದು... ಇವುಗಳನ್ನೆಲ್ಲ ತುಂಬ ತೀವ್ರವಾಗಿ ಹಚ್ಚಿಕೊಂಡು, ಅವರಿಗೆ ಸಂಬಂಧಿಸಿದ ಎಲ್ಲ ಸಂಗತಿಗಳಿಗೂ ತೀವ್ರವಾಗಿ ಸ್ಪಂದಿಸುತ್ತ ಬೆಳೆದವರು ನಾವು.

'ಕಭಿ ಕಭಿ ಮೇರೆ ದಿಲ್ ಮೆ ಖಯಾಲ್ ಆತಾ ಹೈ' ಹಾಡನ್ನು ಹಾಡುತ್ತ ಅವರ ಧ್ವನಿಯಲ್ಲಿ ಅನುಕರಿಸಲು ಪ್ರಯತ್ನಿಸುತ್ತಿದ್ದೆವು. ಆಗಿನ್ನೂ ನಮ್ಮ ಧ್ವನಿಯೇ ಒಡೆದಿರಲಿಲ್ಲ. ಆಗ ಅವರ ಥರ ಧ್ವನಿ ಬರದೆ ಕಯ್ಯ ಕಯ್ಯ ಕಯ್ಯ ಎಂದು ಚಿಕ್ಕಮಕ್ಕಳು ಜಾತ್ರೆಯಲ್ಲಿ ಪೀಪಿ ಊದಿದಂಗೆ ಕೇಳ್ತಿತ್ತು. 'ಯಪ್ಪೋ... ಎಂಥ ಧ್ವನಿ ಅದು... ಹಾಗೆ ಮಾತಾಡೋಕೆ ಯಾರಿಗೂ ಸಾಧ್ಯವಿಲ್ಲ' ಎಂದು ಬೆರಗಿನಿಂದ ಮಾತಾಡಿಕೊಳ್ತಿದ್ವಿ.

ಅಮಿತಾಭ್ ನಮ್ಮ ಸಿನಿಮಾಪ್ರಜ್ಞೆಯ ಜೊತೆಜೊತೆಗೇ ನಮ್ಮೊಳಗೆ ಬೆಳೆದರು. 'ಶಹೆನ್ ಶಾ' ಸಿನಿಮಾದಲ್ಲಿ ಕೈಯಲ್ಲಿ ಬಿಲ್ಲು ಬಾಣ ಹಿಡಿದುಕೊಂಡು ಕುದುರೆಯಲ್ಲಿ ಬರುವುದು... ಅವರ ಸಾಹಸ... ಹೀಗೆ ಅವರ ಬಗ್ಗೆ ಏನೇನೋ ಫ್ಯಾಸಿನೇಷನ್‌ಗಳು ನಮಗೆ. ಅವರಿಗೆ ವಯಸ್ಸೇ ಆಗಲ್ಲ ಅಂತಂದುಕೊಂಡಿದ್ದೆವು.

ಹೀಗೆ ಅಮಿತಾಭ್ ಸಿನಿಮಾಗಳನ್ನು ನೋಡುತ್ತಲೇ ಬೆಳೆದ ನಾನೂ ನಂತರ ಸಿನಿಮಾ ಕ್ಷೇತ್ರಕ್ಕೆ ಬರುವುದು ಎಂದು ನಿರ್ಧರಿಸಿದೆ. 'ಮುಂಗಾರು ಮಳೆ'ಯ ಮೂಲಕ ದೊಡ್ಡ ಯಶಸ್ಸೂ ಸಿಕ್ಕಿತು. ಆ ಸಿನಿಮಾವನ್ನು ಹಿಂದಿಗೆ ರೀಮೇಕ್ ಮಾಡಿ ಎಂದು ಒಂದಿಷ್ಟು ಜನ ಸಲಹೆ ಕೊಟ್ಟರು. ಆಗಲೂ ನನಗೆ ಅಮಿತಾಭ್ ಬಚ್ಚನ್ ಜೊತೆ ಸಿನಿಮಾ ಮಾಡಬೇಕು ಎಂಬ ಯೋಚನೆ ಬಂದಿರಲಿಲ್ಲ. ಯಾಕೆಂದರೆ ನಟ ಎನ್ನುವುದಕ್ಕಿಂತ ನನ್ನ ಮಟ್ಟಿಗೆ ಅವರೊಂದು ಪ್ರಜ್ಞೆಯಾಗಿದ್ದರು.

ಒಂದು ದಿನ ಮುಂಬೈ ವಿಮಾನ ನಿಲ್ದಾಣದಲ್ಲಿ ನಿಂತಿದ್ದಾಗ ಮೊಬೈಲ್ ಜಾಹೀರಾತಿನಲ್ಲಿ ಅವರ ಚಿತ್ರ ನೋಡಿದೆ. 40X60 ಸೈಜಿನ ಜಾಹೀರಾತು ಅದು. ಅಷ್ಟು ಡೀಟೆಲ್ ಆಗಿ ಅವರನ್ನು ನೋಡೇ ಇರಲಿಲ್ಲ ನಾನು. ಅವತ್ತು 'ಇವ್ರನ್ನು ಇಷ್ಟೊಂದು ಇಷ್ಟಪಡ್ತೀನಲ್ಲಾ, ಅವಕಾಶ ಸಿಕ್ರೆ ಇವ್ರಿಗೆ ಕ್ಯಾಮೆರಾ ಇಡಬೇಕು' ಅನಿಸಿತ್ತು. ರಾಕ್‌ಲೈನ್ ವೆಂಕಟೇಶ್ ಅವರ ಹತ್ರ ಈ ಆಸೆಯನ್ನು ಹೇಳಿಕೊಂಡೆ. 'ನೀವೇನ್ರಿ ನೀವು...' ಎಂದು ನಕ್ಕರು. ಆದರೆ, ಮಾರನೇ ದಿನವೇ ಅಮಿತಾಭ್ ಭೇಟಿಗೆ ಅವಕಾಶ ಮಾಡಿಕೊಟ್ಟುಬಿಟ್ಟರು.

ಯಾವುದೋ ಕಥೆಯ ಎಳೆ ತಲೆಯಲ್ಲಿ ಇತ್ತು. ಜೊತೆಗೆ ಪ್ರಕಾಶ್ ಬೆಳವಾಡಿ ಅವರನ್ನೂ ಕರೆದುಕೊಂಡು ನಾನು, ರಾಕ್‌ಲೈನ್, ಅಮಿತಾಭ್ ಮನೆಗೆ ಹೋದ್ವಿ. ಅಮಿತಾಭ್ ಅವರ ಕೈ ತುಂಬಾ ಉದ್ದ ಇದೆ. ನೀವ್ಯಾರೂ ಊಹೆ ಮಾಡೋಕಾಗಲ್ಲ, ಅಷ್ಟುದ್ದ ಕೈ ಅವರದ್ದು. ಒಂದ್ಹೆದಡಿ ಎತ್ತರದ ವ್ಯಕ್ತಿಗೆ ಮೊಣಕೈವರೆಗೆ ಎಷ್ಟು ಉದ್ದ ಇರತ್ತೋ ಅಮಿತಾಭ್ ಮುಂಗೈಯೇ ಅಷ್ಟು ಉದ್ದ ಇದೆ. ನಾವು ಹೋದಾಗ ಒಂದು ಜುಬ್ಬಾ ಹಾಕಿಕೊಂಡು, ಕನ್ನಡಕ ಹಾಕಿಕೊಂಡು ಕೂತಿದ್ದರು. ನಂಗೆ ದಿಗ್ಭ್ರಮೆಯಾಗಿಬಿಟ್ಟಿತ್ತು. ಅವರ ಕೈ ನೋಡಿ, ಮುಖ ನೋಡುತ್ತ ಕೂತವನಿಗೆ ಐದೆಂಟು ನಿಮಿಷ ಇದು ವಾಸ್ತವ ಎಂದು ಅರಿವೇ ಆಗಲಿಲ್ಲ. ನೋಡುತ್ತಾ ಕೂತುಬಿಟ್ಟಿದ್ದೆ.

ಹಿಂದೊಮ್ಮೆ ಕಾರ್ಯಕ್ರಮದಲ್ಲಿ ತೇಜಸ್ವಿ ಅವರನ್ನು ನೋಡಿದಾಗಲೂ ನನಗೆ ಹೀಗೆಯೇ ಆಗಿತ್ತು. ಅವರು ಎಲೆ ಅಡಿಕೆ ಹಾಕಿಕೊಂಡು ಕೂತಿದ್ದರು. ನನಗೆ ಅವರನ್ನು ನೋಡಿ ಹತ್ತಿರ ಹೋಗಿ ಮಾತನಾಡಿಸಲಿಕ್ಕೇ ಸಾಧ್ಯವಾಗಿರಲಿಲ್ಲ. ನಾವು ತುಂಬ ಇಷ್ಟಪಟ್ಟ ವ್ಯಕ್ತಿಗಳ ಬಿಂಬವೊಂದು ನಮ್ಮ ಮನಸಲ್ಲಿ ಕಟ್ಟಿಕೊಂಡಿರುತ್ತೇವಲ್ಲ... ಆ ಬಿಂಬ ತುಂಬಾ ಚೆನ್ನಾಗಿರತ್ತೆ. ಅವರ ಕುರಿತಾಗಿ ಇರುವ ಕಲ್ಪನೆಗಳು, ಪ್ರೀತಿಯ ಜೊತೆಗೆ ನಮ್ಮಷ್ಟಕ್ಕೆ ನಾವು ಆರಾಮಾಗಿ ಇರ್ತೇವೆ. ಆದರೆ ತೀರಾ ಐದಡಿ ಹತ್ತಿರಕ್ಕೆ ಹೋದಾಗ ನಾವು ಏನು ಅಂದುಕೊಂಡಿದ್ದೇವೆ ಅದನ್ನ ಮಾತಾಡಲು ಸಾಧ್ಯವಾಗದೆ ಏನೋ ಸರಿಹೋಗುವುದಿಲ್ಲ. ಏನು ಹೇಳೋಕೆ ಹೋದ್ರೂ ಎಡವಟ್ಟೇ ಆಗತ್ತೆ. ಹಾಗಾಗಿ ಕಾರ್ಯಕ್ರಮದಲ್ಲಿ ನಾನು ಒಳಗೇ ಹೋಗದೆ, 'ನಾನ್ ಅಷ್ಟು ಇಷ್ಟಪಡ್ತೀನಲ್ಲಾ, ಅದು ಹಾಗೇ ಇರ್ಲಿ. ಅವರಿಗೆ ಹೇಳೋದೇ ಬೇಡ' ಅನಿಸಿ ತಿರುಗಿ ಬಂದುಬಿಟ್ಟಿದ್ದೆ.

ಅಮಿತಾಭ್ ಮನೆಗೆ ಹೋದಾಗಲೂ ಹೀಗೆಯೇ ಆಯಿತು. ನಿಜವಾದ ಅಭಿಮಾನಿ ಸಿಗುವುದೇ ಇಲ್ಲ ಅನ್ನುವುದಕ್ಕೆ ಇದೇ ಒಳ್ಳೆಯ ಉದಾಹರಣೆ. 'ನಮ್ಮನ್ನು ಇಷ್ಟಪಡುವ ಎಷ್ಟೋ ಜನರು ನಮ್ಮೆದುರು ಬರುವುದಕ್ಕೆ ನಾಚಿಕೊಳ್ಳುತ್ತಾರೆ. ಅಥವಾ ನಾವು ಯಾರನ್ನು ತುಂಬಾ ಇಷ್ಟಪಡ್ತೀವಿ ಅವರ ಎದುರು ಹೋಗುವುದಕ್ಕೆ ನಮಗೂ ಅಷ್ಟೇ ನಾಚಿಕೆ ಆಗುತ್ತದೆ' ಎಂದು ನನಗೆ ಅವತ್ತೇ



ತ್ರಿವೇಣಿ ಸಂಗಮ: ರಾಜ್‌ಕುಮಾರ್, ಪಾರ್ವತಮ್ಮ ಅವರೊಂದಿಗೆ 'ಬಿಗ್ ಬಿ'